ಏಳಿಗೆಗೆ ಧಕ್ಕೆ ಉಂಟಾಗುವುದಿಲ್ಲವೆ ಹಾಗೂ ಈ ತಿದ್ದುಪಡಿಯು 18-9-1992 ರ ಹೈಪವರ್ ಕಮಿಟಿಯ ಶಿಫಾರಸ್ಸಿಗೆ ವಿರುದ್ಧವಾಗಿಲ್ಲವೆ;

ಈ. ಸದರಿ ತಿದ್ದುಪಡಿಯು ಸರ್ಕಾರದ ಅಧಿಕೃತ ಟಿಪ್ಪಣಿ ಸಂಖ್ಯೆ:ಸಿಆಸುಇ 126 ಎಸ್‌ಸಿಆರ್ 82 ದಿನಾಂಕ: 26-11-1992 ರ ಆದೇಶಕ್ಕೆ ವಿರುದ್ಧವಾಗಿಲ್ಲವೆ;

ಉ. ಹಾಗಿದ್ದಲ್ಲಿ ಸದರಿ ತಿದ್ದುಪಡಿಯನ್ನು ಹಿಂದಕ್ಕೆ ಪಡೆದು ಈಗಾಗಲೇ ಇರುವ ಮೂರು ವರ್ಷಗಳ ಮತ್ತೆ ಇಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಇಲ್ಲ. ಈ ಆದೇಶವು ಈಗಲೂ ಅನ್ವಯವಾಗುತ್ತದೆ.

ಉ. ಉದ್ಭವಿಸುವುದಿಲ್ಲ.

## ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಆಗುತ್ತಿರುವ ತೊಂದರೆಗಳು

**125 (1896):** ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):-

ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಕರ್ತವ್ಯನಿರತ ನಿಷ್ಠ ನೌಕರ ವರ್ಗದವರಿಗೆ ತೊಂದರೆಯಾಗುತ್ತಿರುವುದು ಮತ್ತು ಮಾರ್ಚ್‌ನಿಂದ ಜೂನ್ ತಿಂಗಳವರೆಗೆ ವರ್ಗಾವಣೆಗಾಗಿ ನೌಕರರು ಅಲೆದಾಡಬೇಕಾಗಿರುವುದರಿಂದ ಸರ್ಕಾರಿ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ;

ಆ. ವರ್ಗಾವಣೆಯಲ್ಲಿ ಆಗುವ ತೊಂದರೆಗಳನ್ನು ತಪ್ಪಿಸಲು 1993-94ರ ಸಾಮಾನ್ಯ ವರ್ಗಾವಣೆಗಾಗಿ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನೇನಾದಾರೂ ಕೈಗೊಳ್ಳಲು ಉದ್ದೇಶಿಸಿರುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

## ಮೂಡಬಿದರೆಯಲ್ಲಿ ಕ್ರೀಡಾಂಗಣ

**1252 (1441):** ಶ್ರೀ ಕೆ. ಸೋಮಪ್ಪ ಸುವರ್ಣ (ಮೂಲ್ಕಿ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಮೂಡಬಿದರೆಯ ಕಡಲ್ಕೆರೆಯಲ್ಲಿ ಮಂಜೂರಾದ 4 ಎಕರೆ ಸ್ಥಳದಲ್ಲಿ 200 ಮೀಟರಿನ ಟ್ರಾಕ್